ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ 1 ರಿಂದ 5ನೇ ಪ್ರತಿವಾದಿಗಳ ಪರ ವಕೀಲರಿಂದಃ

ಹನುಮಪ್ಪ ವಣಗೇರಿ ತಂದೆಯ ಹೆಸರು ಗೋವಿಂದಪ್ಪ, ತಾಯಿ ಹುಲಿಗೆಮ್ಮ ಅಗಿರುತ್ತದೆ. ಅವರ ಹೆಸರುಗಳನ್ನು ವಾದ ಪತ್ರದಲ್ಲಿ ತೋರಿಸಿರುವುದಿಲ್ಲ. ಹನಮಪ್ಪನಿಗೆ 4 ಜನ ಗಂಡು ಮಕ್ಕಳು ಬಸಪ್ಪ, ಹನುಮಪ್ಪ, ಬಸವಂತಪ್ಪ ಮತ್ತು ಯಮನಪ್ಪ ಮತ್ತು ಒಂದು ಹೆಣ್ಣು ಮಗಳು ಯಮನಮ್ಮ ಇರುತ್ತಾರೆ. ಈ ಪ್ರಕರಣದಲ್ಲಿ ಹನುಮಪ್ಪ ಮತ್ತು ಯಮನಮ್ಮರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಹನುಮಪ್ಪ ಮತ್ತು ಬಸವಂತಪ್ಪನ ವಯಸ್ಸು ನನಗೆ ಗೊತ್ತಿಲ್ಲ.

2. ಸದರಿ 4 ಜನ ಗಂಡು ಮಕ್ಕಳು ಪ್ರತ್ಯೇಕವಾಗಿ ವಾಸ ಇದ್ದು ಸುಮಾರು 40 ವರ್ಷಗಳಾಗಿರುತ್ತವೆ. ಅಂದಿನಿಂದ ಅವರುಗಳು ಪ್ರತ್ಯೇಕ ಮನೆಗಳನ್ನು ಮಾಡಿಕೊಂಡು ವಾಸ ಇರುತ್ತಾರೆ ಎಂದರೆ ಸಾಕ್ಷಿಯು ಒಟ್ಟಿಗೆ ವಾಸ ಇರುವುದಾಗಿ ನುಡಿಯುತ್ತಾರೆ. ಅಬಗ್ಗೆ ಅವರ ಪಡಿತರ ಮತ್ತು ಅಧಾರ್ ಕಾರ್ಡ್ ಗಳು ಇರುತ್ತವೆ ಎಂದರೆ ಸರಿ. ಪ್ರತ್ಯೇಕ ಮನೆಗಳನ್ನು ನಾನು ಹುಟ್ಟುವ ಪೂರ್ವದಲ್ಲಿ ಭಾಗ ಮಾಡಿಕೊಂಡು ಇರುತ್ತಾರೆ. ನನಗೆ ಸುಮಾರು 42 ವರ್ಷವಾಗಿರುತ್ತದೆ. ದಾವಾ ಸ್ವತ್ತು 1ನೇ ಪ್ರತಿವಾದಿಯ ಗಂಡನ ಹೆಸರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. 2005 ರಲ್ಲಿ ಅತನ ಹೆಸರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಓದಲು ಬರೆಯಲು ಬರುತ್ತದೆ.

3. ನಿಪಿ-2 ರಲ್ಲಿ ಬಸಪ್ಪ ಹನುಮಪ್ಪ ವಣಗೇರಿರವರ ಹೆಸರು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ಅತನ ಸ್ವಯಾರ್ಜಿತ ಅಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹನುಮಪ್ಪ ವಣಗೇರಿ ಹೆಸರಿನ ದಾಖಲೆಗಳನ್ನು ಹಾಜರು ಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಅತನು ಯಾವಾಗ ಮರಣ ಹೊಂದಿರುತ್ತಾನೆ ಎಂದು ನನಗೆ ಗೊತ್ತಿಲ್ಲ ಅದರೇ ನನ್ನ ತಂದೆ ಚಿಕ್ಕವರು ಇರುವಾಗಲೇ ಮರಣ ಹೊಂದಿರುತ್ತಾರೆ. ಹನುವಪ್ಪ ವಣಗೇರಿರವರಿಗೆ ಸಂಬಂಧಿಸಿದ ಆಸ್ತಿಗಳನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ. ಅತನ ಆಸ್ತಿಗಳನ್ನು ಸೇರಿಸದೇ

ಉದ್ದೇಶ ಪೂರ್ವಕವಾಗಿ ಬಸಪ್ಪನ ಸ್ವಯಾರ್ಜಿತ ದಾವಾ ಆಸ್ತಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ಕಾರದಿಂದ ಬಸಪ್ಪನ ಹೆಸರಿಗೆ ಮಂಜೂರಾದ ಆಸ್ತಿಗಳ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅತನಿಗೆ ಯಾವುದೇ ಆಸ್ತಿ ಸರ್ಕಾರದಿಂದ ಮಂಜೂರಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಇಂದು ದಿನಾಂಕಃ **20-02-2025** ರಂದು ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಕೊಪ್ಪಳ.